**ಕರ್ನಾಟಕ ಸರ್ಕಾರದ ಸಾರ್ವಜನಿಕ ಶಿಕ್ಷಣ ಇಲಾಖೆಯ ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಛೇರಿ, ಉತ್ತರ ವಲಯ, ಮೈಸೂರು .**

ಸಂಖ್ಯೆ : ಸಿ6 : 1956 .ಪೂ.ಪ್ರಾ.ನೋಂ.11/2014–15 ದಿನಾಂಕ : 12–03–2015

**ನಮೂನೆ–2**

**(ನಿಯಮ 3 ಉಪನಿಯಮ 5(ಬಿ)**

**ಪ್ರಮಾಣ ಪತ್ರ ಸಂಖ್ಯೆ : 11/2014–15**

**ಚಿನ್ಮಯಿ ವಿದ್ಯಾಲಯ, ಜಯಲಕ್ಷ್ಮೀಪುರಂ, ಮೈಸೂರು ಇದರ ಗವರ್ನಿಂಗ್ ಕೌನ್ಸಿಲ್‌ಗೆ ಕರ್ನಾಟಕ ಶಿಕ್ಷಣ ಕಾಯ್ದೆ 1983 ( ಕರ್ನಾಟಕ ಆ್ಯಕ್ಟ್ 1995) ಸೆಕ್ಷನ್ 31ರಂತೆ ಈ ದಿನ 12ನೇ ಮಾರ್ಚಿ 2015 ರಂದು ಈ ಕೆಳಗೆ ನಮೂದಿಸಿರುವ ಶಿಕ್ಷಣ ಸಂಸ್ಥೆಯನ್ನು ನಡೆಸಲು ನೋಂದಾಯಿಸಲಾಗಿದೆ ಎಂದು ಪ್ರಮಾಣಿಕರಿಸಲಾಗಿದೆ.**

| | | | |
|---|---|---|---|
| 1 | **ಕ್ರಮಸಂಖ್ಯೆ** | : | 11/2014–15 |
| 2 | **ಶಾಲೆಯ ಹೆಸರು ಮತ್ತು ವಿಳಾಸ** | : | **ಚಿನ್ಮಯಿ ಪೂರ್ವ ಪ್ರಾಥಮಿಕ ಶಾಲೆ, ಜಯಲಕ್ಷ್ಮೀಪುರಂ, ಮೈಸೂರು** |
| 3 | **ಅನುಮತಿ ನೀಡಿದ ತರಗತಿ** | : | **ಎಲ್.ಕೆ.ಜಿ , ಯು.ಕೆ.ಜಿ ( ತಲಾ ಒಂದು ವಿಭಾಗ )** |
| 4 | **ಪ್ರಾರಂಭಿಸಬೇಕಾದ ಶೈಕ್ಷಣಿಕ ವರ್ಷ** | : | 2015–2016 |
| 5 | **ಅನುಮತಿ ನೀಡಿದ ಮಾಧ್ಯಮ** | : | **ಕನ್ನಡ ( ಶಾಶ್ವತ ಅನುದಾನರಹಿತ )** |
| 6 | **ಶುಲ್ಕ ಪಾವತಿ ಮಾಡಿರುವುದು** | : | **ಪರಿಷ್ಕೃತ ನೊಂದಣಿ ಶುಲ್ಕ ರೂ 25,000/–**<br>**ಸಂಸ್ಕರಣ ಶುಲ್ಕ ರೂ 10,000/–** |

ಸದರಿ ಶಿಕ್ಷಣ ಸಂಸ್ಥೆಯನ್ನು ಕ್ರಮ ಸಂಖ್ಯೆ : **11** ಪುಟ ಸಂಖ್ಯೆ : 67 ವಾಲ್ಯೂಂ ಸಂಖ್ಯೆ : **03** ರಲ್ಲಿ ಈ ಕಛೇರಿಯಲ್ಲಿನ ಶೈಕ್ಷಣಿಕ ಸಂಸ್ಥೆಗಳ ನೋಂದಣಿ ವಹಿಯಲ್ಲಿ ನೋಂದಾಯಿಸಲಾಗಿದೆ.

ಈ ನೋಂದಣಿ ಪ್ರಮಾಣ ಪತ್ರವನ್ನು ಈ ಕೆಳಕಂಡ ಷರತ್ತಿಗೊಳಪಟ್ಟು ನೀಡಲಾಗಿದೆ. ಇದರಲ್ಲಿ ಯಾವುದೇ ಷರತ್ತನ್ನು ಉಲ್ಲಂಘಿಸಿದಲ್ಲಿ ಮೇಲ್ಕಂಡ (ನೋಂದಣಿ) ಅನುಮತಿಯನ್ನು ರದ್ದುಪಡಿಸಲು ಅಧಿಕಾರವನ್ನು ಇಲಾಖೆಯು ಕಾಯ್ದಿರಿಸಿಕೊಂಡಿದೆ.

7.ಈ ನೋಂದಾವಣಿಯ ನಿಯಮ 3(5)(4)ಕ್ಕೆ ಒಳಪಟ್ಟಿರುತ್ತದೆ.

8..ಗವರ್ನಿಂಗ್ ಕೌನ್ಸಿಲ್ ಇವರು ನಿಯಮ 4(4)ರಲ್ಲಿ ತಿಳಿಸಿರುವ ಎಲ್ಲಾ ಷರತ್ತುಗಳನ್ನು ಕಡ್ಡಾಯವಾಗಿ ಪಾಲಿಸಬೇಕು.

9.ಶಾಲಾ ನಿವೇಶನ, ವಿಸ್ತೀರ್ಣ, ಕಟ್ಟಡ, ಪಾಠೋಪಕರಣ, ಪೀಠೋಪಕರಣಗಳು, ಸಿಬ್ಬಂದಿವರ್ಗ ಆರ್ಥಿಕ ಅನುಕೂಲತೆಗಳು ಮುಂತಾದವುಗಳನ್ನು ಒದಗಿಸುವ ಷರತ್ತಿಗೆ ಒಳಪಟ್ಟಿರುತ್ತದೆ.

10.ಸದರಿ ಶಿಕ್ಷಣ ಸಂಸ್ಥೆಯು ಯಾವುದೇ ಸಂದರ್ಭದಲ್ಲಿಯೂ ಸರ್ಕಾರದ ಪೂರ್ವಾನುಮತಿ ಇಲ್ಲದೆ ಹೆಚ್ಚಿನ ವಿಭಾಗಗಳನ್ನು ತೆರೆಯುವಂತಿಲ್ಲ.

11.ಶಾಲೆಯನ್ನು ಮಂಜೂರು ಮಾಡಿರುವ ಮಾಧ್ಯಮದಲ್ಲಿ ಮತ್ತು ಅದೇ ಸ್ಥಳದಲ್ಲಿ ಮಾತ್ರ ತೆರೆಯತಕ್ಕದ್ದು ಹಾಗೂ ಯಾವುದೇ ಕಾರಣಕ್ಕೂ ಸ್ಥಳ ಬದಲಾವಣೆ ಮಾಡಲು ಅವಕಾಶವಿರುವುದಿಲ್ಲ.

12.ಯಾವ ಆಡಳಿತ ಮಂಡಳಿಗೆ ಶಾಲೆ ನಡೆಸಲು ಅನುಮತಿ ನೀಡಲಾಗಿದೆಯೋ ಅದೇ ಮಂಡಳಿಯು ಅದೇ ಸ್ಥಳದಲ್ಲಿಯೇ ಮತ್ತು ಅದೇ ಹೆಸರಿನಲ್ಲಿ ನಡೆಸತಕ್ಕದ್ದು, ಮತ್ತು ಯಾವುದೇ ಕಾರಣಕ್ಕೂ ಸರ್ಕಾರದ ಪೂರ್ವಾನುಮತಿ ಇಲ್ಲದೆ ಹಸ್ತಾಂತರಿಸತಕ್ಕದಲ್ಲ

13.ಈ ಶಿಕ್ಷಣ ಸಂಸ್ಥೆಯವರು ಶಿಕ್ಷಣ ಸಂಸ್ಥೆಗಳಿಗೆ ಸಂಬಂಧಿಸಿದಂತೆ ಜಾರಿಯಲ್ಲಿರುವ ಹಾಗೂ ಆಗಿಂದಾಗ್ಗೆ ಹೊರಡಿಸಿದ ಎಲ್ಲಾ ಸರ್ಕಾರಿ ಆದೇಶಗಳು ಹಾಗೂ ನಿಯಮಗಳನ್ನು ಪಾಲಿಸತಕ್ಕದ್ದು. ಕರ್ನಾಟಕ ಶಿಕ್ಷಣ ಮಸೂದೆ 1983 (ಕರ್ನಾಟಕ ಆ್ಯಕ್ಟ್ ಸಂಖ್ಯೆ : 1:95) ಇದರಡಿಯಲ್ಲಿ ಬರುವ ಕಾಯ್ದೆಗಳನ್ನು ಮತ್ತು ಅದರಲ್ಲಿ ರಚಿಸಲಾಗಿರುವ ನಿಯಮಗಳನ್ನು ತಪ್ಪದೆ ಪಾಲಿಸತಕ್ಕದ್ದು.

14.ಈ ಪ್ರಾಥಮಿಕ ಶಾಲಾ ನೋಂದಾವಣೆಯಂತೆ ಸರ್ಕಾರಿ ಅಧಿಸೂಚನೆ ಸಂಖ್ಯೆ : ಇಡಿ 175 ಪಿ.ಎಂ.ಸಿ. 95 ದಿನಾಂಕ : 07/09/98 ಮತ್ತು ದಿನಾಂಕ : 29/12/98ರ ಪ್ರಕಾರ ಶಾಶ್ವತ ಅನುದಾನರಹಿತವಾಗಿರುತ್ತದೆ. (ಕಜಡಿಟಚಿಟಿಜಟಣಟಥಿ ತಿಙುಣಾಣ ಯಜ)ಆಡಳಿತ ಮಂಡಳಿಯು ಸರ್ಕಾರದಿಂದ ಯಾವುದೇ ಅನುದಾನವನ್ನು ಬಯಸುವುದಿಲ್ಲವೆಂದು ರೂ.20/– ರೂಗಳ ಛಾಪಾ ಕಾಗದದಲ್ಲಿ ನೋಟರಿಯವರ ಮುಂದೆ ಪ್ರಮಾಣೀಕರಿಸಿದ ಒಪ್ಪಿಗೆ ಪತ್ರವನ್ನು ನೀಡುವುದು.

15.ಕರ್ನಾಟಕ ಖಾಸಗಿ ಶಿಕ್ಷಣ ಸಂಸ್ಥೆಗಳ (ಶಿಸ್ತು ಮತ್ತು ನಿಯಂತ್ರಣ) ನಿಯಮ 1999 ರ ನಿಯಮಗಳನ್ನು ತಪ್ಪದೇ ಪಾಲಿಸತಕ್ಕದ್ದು/ ಅವುಗಳಿಗೆ ಬದ್ಧವಾಗಿರತಕ್ಕದ್ದು.

16.ಇಲಾಖೆ, ಹಾಗೂ ಸರ್ಕಾರ ನಿಗಧಿಪಡಿಸಿದ ಪಠ್ಯಪುಸ್ತಕ, ಪರೀಕ್ಷಾ ಕ್ರಮ ಇತ್ಯಾದಿ ತಪ್ಪದೇ ಅಳವಡಿಸತಕ್ಕದ್ದು.

17.ಅನುಮತಿ ಪಡೆದ 2 ತಿಂಗಳೊಳಗಾಗಿ ಕರ್ನಾಟಕ ಶಿಕ್ಷಣ ಕಾಯ್ದೆ 1983 (ಆ್ಯಕ್ಟ್ 1 ಆಫ್ 1995) ಪ್ರಕಾರ ಸೆಕ್ಷನ್ 36 ರಿಂದ 39ರ ರೀತ್ಯಾ ಹಾಗೂ ಇಡಿ 131 ವಿವಿಧ 98, ಬೆಂಗಳೂರು, ದಿನಾಂಕ : 04/11/99 ರಂತೆ ಮಾನ್ಯತೇ ನವೀಕರಣ ಹಾಗೂ ಪ್ರಾವಿಷನಲ್ ಮಾನ್ಯತೇ ನವೀಕರಣ ಹೊಂದಲು ಸರ್ಕಾರಿ ಪ್ರಕಟಣೆ ಇಡಿ 137 ವಿವಿಧ 98, ಬೆಂಗಳೂರು, ದಿನಾಂಕ : 19/05/99 ರ ಪ್ರಕಾರ ಸಕ್ಷಮ ಪ್ರಾಧಿಕಾರಿಗಳಿಗೆ ಮಾನ್ಯತೇ ನವೀಕರಣಕ್ಕೆ ಅರ್ಜಿ ಸಲ್ಲಿಸತಕ್ಕದ್ದು.

18. ಸರ್ಕಾರಿ ಆದೇಶ ಸಂಖ್ಯೆ : ಇಡಿ 28 ಪಿ.ಜಿ.ಸಿ. 94, ದಿನಾಂಕ : 29/04/94ರಂತೆ ಎಲ್.ಕೆ.ಜಿ ಯಿಂದ ಯು.ಕೆ.ಜಿ ತರಗತಿಯವರೆಗೆ ಕನ್ನಡ ಅಥವಾ ಮಕ್ಕಳ ಮಾತೃಭಾಷಾ ಮಾಧ್ಯಮದಲ್ಲಿ ನಡೆಸಿ ಭಾಷಾ ನೀತಿ ಪಾಲಿಸುತ್ತಿರುವ ಶಾಲೆಗೆ ನೋಂದಾಯಿಸಲಾಗಿದೆ. ಭಾಷಾ ನೀತಿಗೆ ಒಳಪಟ್ಟು ನೋಂದಣಿಯಾಗಿರುವ ಶಾಲೆಗಳಿಗೆ ಭಾಷಾ ನೀತಿಯನ್ನು ಉಲ್ಲಂಘಿಸಿರುವುದು ಸರ್ಕಾರದ /ಇಲಾಖೆಯ/ ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಗಮನಕ್ಕೆ ಬಂದಲ್ಲಿ ನಿಯಮಗಳನ್ವಯ ಸದರಿ ಶಾಲೆಯ ಅನುಮತಿ ಮತ್ತು ನೋಂದಾವಣೆಯನ್ನು ರದ್ದುಪಡಿಸಲಾಗುವುದು. ನೋಂದಣಿ ಪ್ರಸ್ತಾವನೆಯೊಡನೆ ಸಲ್ಲಿಸಿದ ದಾಖಲೆಗಳು ಸತ್ಯಕ್ಕೆ ದೂರವಾದದ್ದೆಂದು ಯಾವುದೇ ಸಂದರ್ಭದಲ್ಲಿ ಕಂಡು ಬಂದಲ್ಲಿ ಈ ನೋಂದಣಿಯನ್ನು ರದ್ದುಪಡಿಸಲಾಗುವುದು.

19. ಶಾಲೆಯನ್ನು ಪ್ರಾರಂಭಿಸಲು ಸಂಸ್ಥೆಯವರು ಭದ್ರತಾ ಠೇವಣಿಯನ್ನು ಕ್ಷೇತ್ರ ಶಿಕ್ಷಣಾಧಿಕಾರಿಗಳು ಉತ್ತರ ವಲಯ ಮೈಸೂರು ಹಾಗೂ ಆಡಳಿತ ಮಂಡಳಿಯ ಕಾರ್ಯದರ್ಶಿಗಳ ಜಂಟಿ ಖಾತೆಯಲ್ಲಿ ಇಡತಕ್ಕದ್ದು.

20. ಅನುಮತಿ ನೀಡಿದ ಪ್ರತಿಯೊಂದು ತರಗತಿಯಲ್ಲಿ ಮಕ್ಕಳ ಹಾಗೂ ಶಿಕ್ಷಕರ ಅನುಪಾತವನ್ನು ನಿಯಮಾನುಸಾರ ಪಾಲಿಸತಕ್ಕದ್ದು.

21. ತರಬೇತಿ ಹೊಂದಿದ ಹಾಗೂ ಇಲಾಖೆಯ ನಿಯಮಗಳ ಪ್ರಕಾರ ವಿದ್ಯಾರ್ಹತೆ ಹೊಂದಿದ ಶಿಕ್ಷಕರನ್ನು ಮಾತ್ರ ನೇಮಿಸತಕ್ಕದ್ದು.

22. ಪ್ರತಿ ವರ್ಷವು ವಿದ್ಯಾರ್ಥಿಗಳ ವೈದ್ಯಕೀಯ ಪರೀಕ್ಷೆಯನ್ನು ನಿಯಮಾನುಸಾರ ಮಾಡಿಸತಕ್ಕದ್ದು.

23. ಕರ್ನಾಟಕ ಶಿಕ್ಷಣ ಮಸೂದೆ ನಿಯಮಗಳ ಪ್ರಕಾರ ಶಾಲೆಗೆ ಬೇಕಾದ ಪೀಠೋಪಕರಣ, ಪಾಠೋಪಕರಣ, ಗ್ರಂಥಾಲಯ ಪುಸ್ತಕಗಳು, ಆಟದ ಮೈದಾನ, ಶಾಲಾ ಕಟ್ಟಡ ಮುಂತಾದ ಸೌಲಭ್ಯಗಳನ್ನು ಒಂದು ವರ್ಷದಲ್ಲಿ ಒದಗಿಸಿಕೊಳ್ಳತಕ್ಕದ್ದು. ಇಲ್ಲದಿದ್ದಲ್ಲಿ ನೋಂದಣಿಯನ್ನು ರದ್ದುಗೊಳಿಸಲಾಗುವುದು.

24. ಶಾಲಾ ಕೆಲಸದ ವೇಳೆ ಮತ್ತು ದಿನಗಳನ್ನು ಇಲಾಖೆಯ ನಿಯಮಗಳಂತೆ ಪಾಲಿಸತಕ್ಕದ್ದು.

25. ಶಾಲೆ ತೆರೆದ ಬಗ್ಗೆ ಹಾಗೂ ವಿದ್ಯಾರ್ಥಿಗಳ ದಾಖಲಾತಿಯನ್ನು ಶಾಲೆ ನೋಂದಣಿಯಾದ ಅಥವಾ ಶೈಕ್ಷಣಿಕ ವರ್ಷ ಪ್ರಾರಂಭದ ಎರಡು ತಿಂಗಳ ಒಳಗಾಗಿ ಈ ಕಛೇರಿಗೆ ತಿಳಿಸಬೇಕು. ಒಂದು ವೇಳೆ ಶಾಲೆ ತೆರೆಯದಿದ್ದಲ್ಲಿ ಹಾಗೂ ಯಾವುದೇ ಷರತ್ತುಗಳನ್ನು ಪಾಲಿಸದಿದ್ದಲ್ಲಿ ಈ ಆದೇಶ ತನ್ನಿಂದ ತಾನೇ ರದ್ದಾಗುವುದು.

41. ಎಲ್.ಕೆ.ಜಿ ತರಗತಿ ಪ್ರಾರಂಭಿಸಲು (ಕನ್ನಡ ಮಾಧ್ಯಮ) ನೋಂದಾಯಿಸಿರುವುದರಿಂದ ಯು.ಕೆ.ಜಿ. ತರಗತಿಯನ್ನು ಸ್ವಾಭಾವಿಕ ಬೆಳವಣಿಗೆ ಆಧಾರದ ಮೇಲೆ ಪ್ರಾರಂಭಿಸತಕ್ಕದ್ದು.

42. ಪ್ರಾಥಮಿಕ ಶಾಲೆಯ ಮಂಜೂರಾತಿಯಿಂದ ಕನ್ನಡ ಮಾಧ್ಯಮದ ಎಲ್.ಕೆ.ಜಿ. ಮತ್ತು ಯು.ಕೆ.ಜಿ. ತರಗತಿಗಳಿಗೆ ಯಾವುದೇ ರೀತಿ ದಕ್ಕೆಬಾರದಂತೆ ನೋಡಿಕೊಳ್ಳುವುದು.

43. ಸರ್ಕಾರದ ಸುತ್ತೋಲೆ ಸಂಖ್ಯೆ : ಇಡಿ 27 ಎಸ್ಇಪಿ. 03. ದಿನಾಂಕ : 13/02/2003ರ ಸೂಚನೆಗಳನ್ನು ಕಡ್ಡಾಯವಾಗಿ ಪಾಲಿಸಿ, ಶಾಲೆಯಲ್ಲಿ ನೇಮಕಗೊಂಡಿರುವ ಸಿಬ್ಬಂದಿಯವರುಗಳ ಸೇವಾ ಪುಸ್ತಕವನ್ನು ತೆರೆದು, ಅದರಲ್ಲಿ ಶಿಕ್ಷಕರ ಸೇವಾ ವಿವರಗಳನ್ನು ನಿಯಮಾನುಸಾರ ದಾಖಲು ಮಾಡಿ ಕಡ್ಡಾಯವಾಗಿ ನಿರ್ವಹಿಸುವುದು.

44. ಸಲ್ಲಿಸಿರುವ ಪ್ರಸ್ತಾವನೆಯಲ್ಲಿ ಯಾವುದೇ ದಾಖಲೆಗಳು ಸುಳ್ಳು ದಾಖಲೆಗಳೆಂದು ಕಂಡು ಬಂದಲ್ಲಿ ಈ ನೊಂದಣಿಯನ್ನು ರದ್ದುಪಡಿಸಲಾಗುವುದು.

45. ಈ ಶಾಲಾ ಶಿಕ್ಷಕರನ್ನು ಗಣತಿ ಕಾರ್ಯಕ್ಕೆ ತಪ್ಪದೇ ನಿಯೋಜಿಸುವುದು

ಸ್ಥಳ : ಮೈಸೂರು
ದಿನಾಂಕ : 12-03-2015

ಕ್ಷೇತ್ರ ಶಿಕ್ಷಣಾಧಿಕಾರಿಗಳು
ಉತ್ತರ ವಲಯ, ಮೈಸೂರು.
ಸಾರ್ವಜನಿಕ ಶಿಕ್ಷಣ ಇಲಾಖೆ
ಹಾಗೂ ನೋಂದಣಿ ಅಧಿಕಾರಿ.

ಗೆ,

ಕಾರ್ಯದರ್ಶಿಗಳು,
ಚಿನ್ಮಯ ವಿದ್ಯಾಲಯ,
ಜಯಲಕ್ಷ್ಮೀಪುರಂ,
ಮೈಸೂರು.